(ಉ) ಗ್ರಾಮೀಣ ಭಾಗಕ್ಕೆ ಬೇಡಿಕೆಗೆ ಅನುಗುಣವಾಗಿ ಹೊಸ ಬಸ್ಸುಗಳನ್ನು ಪೂರೈಸಲಾಗುವುದು.

(ಊ) ಚಿಕ್ಕಬಳ್ಳಾಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಚಿಕ್ಕಬಳ್ಳಾಪುರ ವಿಭಾಗದ ಬಸ್ಸುಗಳ ಸಂಚಾರದಿಮದ ಜನರಿಎ ತೊಂದರೆಯಾಗುತ್ತಿರುವ ಬಗ್ಗೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

2014–15ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ವಿಭಾಗದಲ್ಲಿ 68 ವಾಹನಗಳನ್ನು ನಿರುಪಯುಕ್ತಗೊಳಿಸಲು ಯೋಜಿಸಲಾಗಿದ್ದು ಆ ಪೈಕಿ ಈಗಾಗಲೇ 9 ವಾಹನಗಳನ್ನು ನಿರುಪಯುಕ್ತಗೊಳಿಸಲು ಅನುಮತಿ ನೀಡ ಲಾಗಿದೆ. ಉಳಿದ 59 ವಾಹನಗಳ ಹಾಲಿ ಭೌತಿಕ ಸ್ಥಿತಿಯನ್ನು ಪರಿಶೀಲಿಸಿ ಹಂತ ಹಂತವಾಗಿ ನಿರುಪಯುಕ್ತಗೊಳಿಸಲು ಕ್ರಮಕೈಗೊಳ್ಳ ಲಾಗುವುದು. ಈರೀತಿ ನಿರುಪಯುಕ್ತಗೊಳಿಸಲಾದ ವಾಹನಗಳ ಜಾಗ ದಲ್ಲಿ ಹೊಸ ವಾಹನಗಳನ್ನು ಸೇರ್ಪಡೆಗೊಳಿಸಲಾಗುವುದು.

ಸ್ನಾತಕೋತ್ತರ ಹಾಗೂ ಪಿ. ಜಿ. ಪಡೆದ ವೈದ್ಯರಿಗೆ ಪ್ರೋತ್ಸಾಹ ಭತ್ಯೆ

759 (1426); ಡಾ: ಸುಧಾಕರ್ ಕೆ.

(ಅ) ಸ್ನಾತಕೋತ್ತರ ಡಿಪ್ಲೋಮಾ ಹಾಗೂ ಪಿ.ಜಿ. ಪಡೆದ ವೈದ್ಯರಿಗೆ ಪ್ರೋತ್ಸಾಹ ಭತ್ಯೆ ನೀಡುವ ವಿಶೇಷ ಯೋಜನೆ ಏನಾದರೂ ಸರ್ಕಾರ ರೂಪಿಸಿದೆಯೇ; (ವಿವರ ನೀಡುವುದು)

(ಆ) ಈ ಯೋಜನೆಯಡಿ ಪ್ರೋತ್ಸಾಹ ಭತ್ಯೆ ಪಡೆಯುತ್ತಿರುವ ವೈದ್ಯರ ಸಂಖ್ಯೆ ಎಷ್ಟು? ಅದಕ್ಕಾಗಿ ಸರ್ಕಾರ ಮೀಸಲಿಟ್ಟಿರುವ ಮೊತ್ತ ಎಷ್ಟು;

(ಇ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು, ಇವರ ಸೇವೆ ಖಾಯಂಗೊಳಿಸಲು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಈ) ರಾಜ್ಯದಲ್ಲಿ ಖಾಲಿ ಇರುವ ವೈದ್ಯರ ಸಂಖ್ಯೆ ಎಷ್ಟು? ಈ ಖಾಲಿ ಹುದ್ದೆ ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮ ಏನು? ಯಾವಾಗ ಎಲ್ಲಾ ವೈದ್ಯರ ನೇಮಕ ಮಾಡಲಾಗುವುದು;

(ಉ) ವೈದ್ಯರಿಗೆ ಪ್ರೋತ್ಸಾಹ ಧನ ನೀಡಿಕೆ ಹಾಗೂ ಖಾಲಿ ಹುದ್ದೆ ಭರ್ತಿ ಮಾಡಿಕೊಂಡರೆ ಸರ್ಕಾರಕ್ಕೆ ಬೀಳುವ ಹೆಚ್ಚುವರಿ ಆರ್ಥಿಕ ಹೊರೆ ಎಷ್ಟು? ವಿವರ ನೀಡುವುದು;

(ಊ) ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರ ದಿಂದ ಪೂರೈಕೆಯಾಗುವ ಔಷಧಿಗಳ ಸೋರಿಕೆ ಪ್ರಮಾಣ ತಡೆಗಟ್ಟಲು ಕೈಗೊಂಡ ಕ್ರಮ ಏನು? ಸೋರಿಕೆ ಪ್ರಮಾಣ ಎಷ್ಟು? ನಿಯಂತ್ರಣದಲ್ಲಿ ಯಶಸ್ಸು ಸಾಧಿಸಲಾಗಿದೆ; ವಿವರ ನೀಡುವುದು?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

(ಅ) ಸ್ನಾತಕೋತ್ತರ ಡಿಪ್ಲೋಮ ಹಾಗೂ ಪಿ. ಈ. ಪಡೆದ ವೈದ್ಯರು ನೇರ ನೇಮಕಾತಿ ಮೂಲಕ ನೇಮಕಾತಿ ಹೊಂದಿ ಸಿಎಂಓ, ಐಸಿಎಂಓ, ಸ್ಪೆಷಲಿಸ್ಟ, ಸೀನಿಯರ್ ಸ್ಪೆಷಲಿಸ್ಟ್, ಇತ್ಯಾದಿ ವೈದ್ಯರಿಗೆ 6 ವರ್ಷಗಳ ಸೇವೆ ಸಲ್ಲಿಸಿದ ವೈದ್ಯರಿಗೆ ಮಾಸಿಕ ರೂ. 16000/– (ಎಂಬಿಬಿಎಸ್) `17600/– (ಸ್ನಾತಕೋತ್ತರ ಡಿಪ್ಲೋಮಾ ಹಾಗೂ ಪಿಜಿ) ಮತ್ತು 13 ವರ್ಷ ಸೇವೆ ಸಲ್ಲಿಸಿದ ವೈದ್ಯರಿಗೆ ರೂ 17000/– (ಎಂಬಿಬಿಎಸ್), `18700/– (ಸ್ನಾತಕೋತ್ತರ ಡಿಪ್ಲೊಮಾ ಹಾಗೂ ಪಿಜಿ) ಪ್ರೋತ್ಸಾಹ ಭತ್ಯೆ ನೀಡಲಾಗುತ್ತಿದೆ 13 ವರ್ಷಕ್ಕಿಂತ ಹೆಚ್ಚಿನ ಸೇವೆ ಸಲ್ಲಿಸಿದ ವೈದ್ಯರಿಗೆ `18000/– (ಎಂಬಿಬಿಎಸ್), `19800/– (ಸ್ನಾತಕೋತ್ತರ ಡಿಪ್ಲೊಮಾ ಹಾಗೂ ಪಿಜಿ) ಪ್ರೋತ್ಸಾಹ ಭತ್ಯೆ ನೀಡಲಾಗುತ್ತಿದೆ.

(ಆ) ಸಾ.ಕ.ವೈದ್ಯಾಧಿಕಾರಿ–1909

ಹಿರಿಯ ವೈದ್ಯರು – 269

ಮು.ವೈದ್ಯರು – 70

ತ.ವೈದ್ಯರು / ಹಿ. ತ. ವೈದ್ಯರು – 1451

ಒಟ್ಟು 3699

ವೇತನಕ್ಕೆ ನಿಗಧಿಪಡಿಸಿದ ಅನುದಾನದಲ್ಲಿ ವೆಚ್ಚವನ್ನು ಭರಿಸಲಾಗುವುದು.

(ಇ) ಗುತ್ತಿಗೆ ವೈದ್ಯರು – 118.

ಹೌದು.

(ಈ) ಸಾ.ಕ.ವೈದ್ಯಾಧಿಕಾರಿಗಳು – 559

ತಜ್ಞ ವೈದ್ಯರು – 1146

ಕೆ.ಪಿ.ಎಸ್.ಸಿ. ಗೆ ಪ್ರಸ್ತಾವನೆ ಸಲ್ಲಿಸುವ ಪ್ರಕ್ರಿಯೆ ಜಾರಿಯಲ್ಲಿದೆ.

(ಉ) 4. ಸಾ.ಕ.ವೈದ್ಯರು ಒಟ್ಟು 559 ಒಬ್ಬ ವೈದ್ಯರಿಗೆ ಮಾಹೆಯಾನ ರೂ. 54051/– ಒಂದು ವರ್ಷಕ್ಕೆ ಅಂದಾಜು ಮೊತ್ತ ` 36.26 ಕೋಟಿ ವೆಚ್ಚ.

ತಜ್ಞ ವೈದ್ಯರು ಒಟ್ಟು 1146 ಒಬ್ಬ ತಜ್ಞ ವೈದ್ಯರ ಮಾಹೆಯಾನ ` 70173/– ಒಂದು ವರ್ಷಕ್ಕೆ ಅಂದಾಜು ಮೊತ್ತ ` 96.50 ಕೋಟಿ ವೆಚ್ಚ.

(ಊ) ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಗಳು, ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿನ ಮುಖ್ಯ ಹಾಗೂ ಉಪ ಉಗ್ರಾಣಗಳು ಹಾಗೂ ಕೆಲವು ಕಾಲೇಜುಗಳಲ್ಲಿ ಸಿಸಿಟಿಬಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಔಷಧಿಗಳ ಸೋರಿಕೆಯಾಗದಂತೆ ತಡೆಗಟ್ಟಲಾಗಿದೆ.

ಈವರೆವಿಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳು / ಬೋಧಕ ಆಸ್ಪತ್ರೆಗಳಲ್ಲಿ ಔಷಧ ಸೋರಿಕೆ ಪ್ರಕರಣಗಳು ಕಂಡುಬಂದಿರುವುದಿಲ್ಲ.

ಅದೇ ರೀತಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಸೋರಿಕೆ ಪ್ರಕರಣಗಳು ಕಂಡುಬಂದಿರುವುದಿಲ್ಲ.

ನಗರದಲ್ಲಿ ಸಂಚರಿಸುವ ವೋಲ್ವೋ ಬಸ್ಸ್:

760 (1427) ಡಾ॥ ಸುಧಾಕರ್ ಕೆ.

(ಅ) ಬೆಂಗಳೂರು ಮಹಾನಗರದಲ್ಲಿ ಸಂಚರಿಸುತ್ತಿರುವ ವೋಲ್ವೋ ಬಸ್ ನಷ್ಟದಲ್ಲಿದೆಯೇ;

(ಆ) ಹವಾನಿಯಂತ್ರಿತ ವೋಲ್ವೋ ಬಸ್‌ನಿಂದ ಬಿಎಂಟಿಸಿಗೆ ಆಗುತ್ತಿರುವ ವಾರ್ಷಿಕ ನಷ್ಟ ಪ್ರಮಾಣ ಎಷ್ಟು; (ಕಳೆದ ಮೂರು ವರ್ಷದ ವಾರ್ಷಿಕ ವಾರು ನಷ್ಟದ ವಿವರ ನೀಡುವುದು)

(ಇ) ಹೊಸ ವೋಲ್ವೋ ಖರೀದಿಸಲು ಇಲಾಖೆ ನಿರ್ಧರಿಸಿದೆಯೇ; ಎಷ್ಟು ಬಸ್‌ಗಳನ್ನು ಖರೀದಿ ಮಾಡಲಾಗುವುದು;

(ಈ) ಹವಾನಿಯಂತ್ರಿತ ವೋಲ್ವೋ ಬಸ್‌ಗಳ ದರ ಎಷ್ಟಿದೆ; ಮುಂದಿನ ದಿನ ಗಳಲ್ಲಿ ಈ ಬಸ್‌ಗಳನ್ನು ಲಾಭದಾಯಕವಾಗಿಸಲು ಇಲಾಖೆ ಕೈಗೊಂಡ ಕ್ರಮಗಳು ಯಾವುವು?

(ಉ) ಬೆಂಗಳೂರು ಮಹಾನಗರದಲ್ಲಿ ಸಂಚರಿಸುವ ವೋಲ್ವೋ ಬಸ್ಸುಗಳ ಸಂಖ್ಯೆ ಎಷ್ಟು; ಇವು ಯಾವ ಯಾವ ಮಾರ್ಗದಲ್ಲಿ ಸಂಚರಿಸುತ್ತವೆ? ಎಷ್ಟು ಪ್ರಯಾಣಿಕರು ನಿತ್ಯ ಇದರಲ್ಲಿ ಸಂಚರಿಸುತ್ತಾರೆ; ಇದರಿಂದ ಬರುವ ಆದಾಯ ಪ್ರಮಾಣ ಎಷ್ಟು;

(ಊ) ವೋಲ್ವೋ ಬಸ್ ಸಂಚಾರದಲ್ಲಿ ಲಾಭದಾಯಕ ಸ್ಥಿತಿಯಲ್ಲಿರುವ ಮಾರ್ಗಗಳು ಯಾವುವು? ನಷ್ಟದಲ್ಲಿರುವ ಮಾರ್ಗದ ಸಂಚಾರವನ್ನು ಲಾಭದಾಯಕವಾಗಿಸಲು ಕೈಗೊಂಡ ಕ್ರಮ ಏನು?